ವೇದಾವತಿ ನದಿಗೆ ಅಡ್ಡಲಾಗಿ ಚೆಕ್‌ಡ್ಯಾಂ ನಿರ್ಮಾಣ

(8)72

ಶ್ರೀ ತಿಪ್ಪೇಸ್ವಾಮಿ

ಪ್ರಶ್ನೆಗಳು

ಅ) ಚಳ್ಳಕೆರೆ ತಾಲ್ಲೂಕಿನಲ್ಲಿ ಗೋಸಿಕೆರೆ ಹತ್ತಿರ ವೇದಾವತಿ ನದಿಗೆ ಅಡ್ಡಲಾಗಿ ಚೆಕ್‌ಡ್ಯಾಂ ನಿರ್ಮಾಣ ಮಾಡಲು ಸಲ್ಲಿಸಲಾಗಿದ್ದ ಮನವಿಯ ಪ್ರಸ್ತಾವನೆ ಯಾವ ಹಂತದಲ್ಲಿದೆ;

ಆ) ಹಾಗಿದ್ದಲ್ಲಿ, ಚೆಕ್‌ಡ್ಯಾಂ ನಿರ್ಮಾಣವು ತುಂಬಾ ಅವಶ್ಯಕವಾಗಿದ್ದು, ಅದಕ್ಕಾಗಿ ಯಾವಾಗ ಹಣ ಬಿಡುಗಡೆ ಮಾಡಲಾಗುವುದು?

ಶ್ರೀ ಗೋವಿಂದ ಎಂ.ಕಾರಜೋಳ (ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಉತ್ತರಗಳು

ಅ) 2012–13ನೇ ಸಾಲಿನ ಕೇಂದ್ರ ನೆರವಿನ ಎ.ಐ.ಬಿ.ಪಿ. ಯೋಜನೆಯಡಿಯಲ್ಲಿ ಪ್ರಸ್ತಾಪಿಸಲು ಚಳ್ಳಕೆರೆ ತಾಲ್ಲೂಕಿನಲ್ಲಿ ಗೋಸಿಕೆರೆ ಹತ್ತಿರ ವೇದಾವತಿ ನದಿಗೆ ಅಡ್ಡಲಾಗಿ ಚೆಕ್‌ಡ್ಯಾಂ ನಿರ್ಮಾಣ ಕಾಮಗಾರಿಯ ಪ್ರಸ್ತಾವನೆಯನ್ನು ರೂ.384.00 ಲಕ್ಷಗಳಿಗೆ ತಯಾರಿಸಲಾಗಿದೆ. ಸದರಿ ಪ್ರಸ್ತಾವನೆಯನ್ನು ಮುಂಬರುವ ತಾಂತ್ರಿಕ ಸಲಹಾ ಸಮಿತಿಯ ಪರಿಶೀಲನೆಗೆ ಮಂಡಿಸಿ ಆರ್ಥಿಕ / ತಾಂತ್ರಿಕವಾಗಿ ಶಖ್ಯವಿದ್ದಲ್ಲಿ ಕೇಂದ್ರ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲಾಗುವುದು.

ಆ) ಕೇಂದ್ರ ಸರ್ಕಾರದಿಂದ ಅನುಮೋದನೆ ಪಡೆದ ನಂತರ ಕಾಮಗಾರಿಯನ್ನು ಕೈಗೊಳ್ಳಲು ಪರಿಶೀಲಿಸಲಾಗುವುದು.

ವನ್ಯ ಮೃಗಗಳ ಹಾವಳಿ

22(495)

ಶ್ರೀ ಕಿಮ್ಮನೆರತ್ನಾಕರ್ (ತೀರ್ಥಹಳ್ಳಿ)

ಪ್ರಶ್ನೆ

ಅ) ವನ್ಯ ಮೃಗಗಳು ಮತ್ತು ಕೋತಿಗಳಿಂದ ರೈತರು ಬೆಳೆದ ಫಸಲು ರೈತರಿಗೆ ದಕ್ಕದಿರುವುದು ಹಾಗೂ ಸರ್ಕಾರ ನೀಡುತ್ತಿರುವ ಪರಿಹಾರ